ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
6ನೇ ಮಹಡಿ, 1ನೇ ಹಂತ,
ಬಹುಮಹಡಿ ಕಟ್ಟಡ, ಬೆಂಗಳೂರು-1,
ದಿನಾಂಕ: 22.07.2014

## ಸುತ್ತೋಲೆ

ವಿಷಯ: 1980ರ ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸನ್ಮಾನ್ ಪಿಂಚಣಿ ಯೋಜನೆಯಡಿ ನಿಧನ ಹೊಂದಿರುವ ಸ್ವಾತಂತ್ರ್ಯ ಯೋಧರ ವಿಧವಾ ಪತ್ನಿ/ ಪತಿ/ ಅವಿವಾಹಿತ ಹೆಣ್ಣು ಮಕ್ಕಳಿಗೆ ಕುಟುಂಬ ಪಿಂಚಣಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2014 ದಿನಾಂಕ:22.05.2014.

2. ಮಹಾಲೇಖಪಾಲರ ಕಛೇರಿಯ ಪತ್ರ ಸಂಖ್ಯೆ: PM/G III/C-40-CFFWR-SSSP/2014-15/126 ದಿನಾಂಕ:09 07.2014.

-*-*-*-

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯ ಪುಟ (3) ರಲ್ಲಿನ ಕೊನೆಯ ಕಂಡಿಕೆಯಲ್ಲಿ "ಅರ್ಜಿದಾರರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಯವರು ತಮ್ಮ ಶಿಫಾರಸ್ಸಿನೊಂದಿಗೆ ಸದರಿ ಪ್ರಸ್ತಾವನೆಯನ್ನು ನೇರವಾಗಿ ಆಯಾ ಜಿಲ್ಲಾ ಖಜಾನಾಧಿಕಾರಿಯವರಿಗೆ ಕಳುಹಿಸಬೇಕು. ಆನಂತರ, ಇಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಖಜಾನಾಧಿಕಾರಿಯವರು ತಮ್ಮ ಮಟ್ಟದಲ್ಲಿ ಪರಿಶೀಲಿಸಿ, ಅರ್ಜಿದಾರರಿಗೆ ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ನಿಯಮಾನುಸಾರ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸಬೇಕು ಹಾಗೂ ಈ ಬಗ್ಗೆ ಮಾಹಿತಿಯನ್ನು ಮಹಾಲೇಖಪಾಲರು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಕಳುಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ." ಎಂಬುದಾಗಿ ತಿಳಿಸಲಾಗಿದೆ.

2. ಆದರೆ, ಕೇಂದ್ರ ಸರ್ಕಾರದ ಸ್ವಾತಂತ್ರ್ಯ ಸೈನಿಕ ಸನ್ಮಾನ್ ಪಿಂಚಣಿ ಯೋಜನೆಯಡಿ ಜಿಲ್ಲಾ ಖಜಾನೆಗಳ ವತಿಯಿಂದ ಪಾವತಿಸಲಾಗುತ್ತಿದ್ದ ಕೇಂದ್ರ ಪಿಂಚಣಿ/ಕೇಂದ್ರ ಕುಟುಂಬ ಪಿಂಚಣಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ವರ್ಗಾಯಿಸಲಾಗಿರುವುದಾಗಿ ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು, ಇವರು ತಮ್ಮ ದಿನಾಂಕ: 04/10/2012ರ ಪತ್ರ ಸಂಖ್ಯೆ: ಡಿಒಟಿ/ಪಿಇಎನ್/65ಎ/2003-04ರಲ್ಲಿ ಮಹಾಲೇಖಪಾಲರಿಗೆ ತಿಳಿಸಿರುವುದಾಗಿ ಉಲ್ಲೇಖ (2)ರ ಪತ್ರದ ಮೂಲಕ ಮಹಾಲೇಖಪಾಲರು ಈ ಸಂಬಂಧ ಮಾಹಿತಿಯನ್ನು ಸರ್ಕಾರಕ್ಕೆ ನೀಡಿರುತ್ತಾರೆ.

3. ಆದಕಾರಣ, ಈ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ. ಅದರಂತೆಯೇ, ಸರ್ಕಾರದ ಸುತ್ತೋಲೆಯ ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2014 ದಿನಾಂಕ: 22/05/2014ರ ಪುಟ (3) ರಲ್ಲಿನ ಕೊನೆಯ ಕಂಡಿಕೆಯಲ್ಲಿ ನಮೂದಿಸಿರುವ ಕೆಳಕಂಡ ಭಾಗವನ್ನು ಈ ಮೂಲಕ ಕೈಬಿಡಲಾಗಿದೆ.

"ಅರ್ಜಿದಾರರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಯವರು ತಮ್ಮ ಶಿಫಾರಸ್ಸಿನೊಂದಿಗೆ ಸದರಿ ಪ್ರಸ್ತಾವನೆಯನ್ನು ನೇರವಾಗಿ ಆಯಾ ಜಿಲ್ಲಾ ಖಜಾನಾಧಿಕಾರಿಯವರಿಗೆ ಕಳುಹಿಸಬೇಕು. ಆನಂತರ, ಇಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಖಜಾನಾಧಿಕಾರಿಯವರು ತಮ್ಮ ಮಟ್ಟದಲ್ಲಿ ಪರಿಶೀಲಿಸಿ, ಅರ್ಜಿದಾರರಿಗೆ ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ನಿಯಮಾನುಸಾರ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸಬೇಕು ಹಾಗೂ ಈ ಬಗ್ಗೆ ಮಾಹಿತಿಯನ್ನು ಮಹಾಲೇಖಪಾಲರು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಕಳುಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ."

ಅದರಂತೆಯೇ, ಮೇಲಿನ ಕಂಡಿಕೆಯ ಸ್ಥಳದಲ್ಲಿ ಈ ಕೆಳಕಂಡ ಕಂಡಿಕೆಯನ್ನು ಈ ಮೂಲಕ ಸೇರಿಸಲಾಗಿದೆ.

"ಅರ್ಜಿದಾರರಿಗೆ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡುವ ಸಲುವಾಗಿ ಜಿಲ್ಲಾಧಿಕಾರಿಯವರು ತಮ್ಮ ಶಿಫಾರಸ್ಸಿನೊಂದಿಗೆ ಸದರಿ ಪ್ರಸ್ತಾವನೆಯನ್ನು ನೇರವಾಗಿ ಅರ್ಜಿದಾರರು ನಿಧನ ಹೊಂದಿದ ಸಮಯದಲ್ಲಿ ಕೇಂದ್ರ ಪಿಂಚಣಿಯನ್ನು ಪಡೆಯುತ್ತಿದ್ದ ಸಂಬಂಧಪಟ್ಟ Public Sector Banks/Director of Accounts/Treasuries/ Pay & Accounts Officers, ಇವರಿಗೆ ಕಳುಹಿಸಬೇಕು. ಆನಂತರ, ಇಂತಹ ಪ್ರಸ್ತಾವನೆಗಳನ್ನು ಸಂಬಂಧಪಟ್ಟ Public Sector Banks/Director of Accounts/Treasuries/ Pay & Accounts Officers, ಇವರು ತಮ್ಮ ಮಟ್ಟದಲ್ಲಿ ಪರಿಶೀಲಿಸಿ, ಅರ್ಜಿದಾರರಿಗೆ ಕೇಂದ್ರ ಸರ್ಕಾರದ ನಿಯಮಗಳ ಪ್ರಕಾರ ನಿಯಮಾನುಸಾರ ಕೇಂದ್ರ ಕುಟುಂಬ ಪಿಂಚಣಿಯನ್ನು ಮಂಜೂರು ಮಾಡಲು ಮುಂದಿನ ಕ್ರಮ ಜರುಗಿಸಬೇಕು ಹಾಗೂ ಈ ಬಗ್ಗೆ ಮಾಹಿತಿಯನ್ನು ಮಹಾಲೇಖಪಾಲರು/ಜಿಲ್ಲಾ ಖಜಾನಾಧಿಕಾರಿಗಳು ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ಕಳುಹಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ."

4. ಮುಂದುವರೆದು, ಸರ್ಕಾರದ ಸುತ್ತೋಲೆಯ ಸಂಖ್ಯೆ: ಸಿಆಸುಇ 17 ಪಿಎಫ್‌ಜಿ 2014 ದಿನಾಂಕ: 22/05/2014ರ ಪುಟ (3) ರಲ್ಲಿನ ಕೊನೆಯಲ್ಲಿ ಈ ಕೆಳಕಂಡ ಕಂಡಿಕೆಯನ್ನು ಸೇರಿಸಲಾಗಿದೆ.

"However, in cases where nominations in favour of spouse and other dependents does not exist as on the date of application, by the freedom fighter, under such conditions, the procedure prescribed as per directions of Government of India, Ministry of Home Affairs, New Delhi vide their letter No. 08/17/89-FF(P) dated: 01.05.1992 is required to be followed [copy enclosed]"

ಅದರಂತೆಯೇ, ಮೇಲಿನ ಸೂಚನೆಗಳನ್ನು ಸಂಬಂಧಪಟ್ಟ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಗಮನಕ್ಕೆ ಪ್ರತ್ಯೇಕವಾಗಿ ತರುವಂತೆ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು/ಜಿಲ್ಲಾಧಿಕಾರಿಯವರಿಗೆ ಈ ಮೂಲಕ ಕೋರಲಾಗಿದೆ.

22/07/14
(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇ.(ಆಸು-ರಾಜಕೀಯ ವಿಶ್ರಾಂತಿ ವೇತನ-1)
ದೂ: 080-22032393

22/7

ಗೆ:

1. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
2. ಎಲ್ಲಾ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು

ಪ್ರತಿ ಮಾಹಿತಿಗಾಗಿ:

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಹಿರಿಯ ಲೆಕ್ಕಾಧಿಕಾರಿಗಳು,(ಪಿ.ಎಂ. ವಿಭಾಗ), ಮಹಾಲೇಖಪಾಲರ ಕಛೇರಿ,(ಎ&ಇ) ಬೆಂಗಳೂರು.